ಸರಸಳಿಗೆ ಒಂದು ಕರೆ ಬಂತು. ಫೋನು ಮಾಡಿದವರು ಯಾರೆಂದು ಅವಳಿಗೆ ಗೊತ್ತಿಲ್ಲ ಆದರೆ ಒಮ್ಮೆಲೇ ಲಾಟರಿ ಹೊಡೆದಷ್ಟು ಸಂತೋಷವಾಯಿತು. ಸ್ವಲ್ಪ ಕಷ್ಟದ ಕೆಲಸವೇ. ಆದರೂ ವರ್ಷಗಟ್ಟಲೆ ಬಿಡಿಗಾಸಿಗಾಗಿ ಕೈ ಚಾಚಬೇಕಿಲ್ಲ. ಯಾರದೋ ಮರ್ಜಿಗಾಗಿ ಕಾಯಬೇಕಿಲ್ಲ. ಒಂಟಿಯಾಗಿ ಬದುಕುತ್ತಿರುವ ತನಗೆ ಇದು ಅದೃಷ್ಟವೇ ಮನೆ ಬಾಗಿಲಿಗೆ ಹುಡುಕಿ ಬಂದಂತೆ. ನಿರ್ಧಾರ ತೆಗೆದುಕೊಳ್ಳಬೇಕಾದವಳು ಅವಳೇ.

ಏನು ಮಾಡುವುದು? ಅವಳ ಒಳ ಮನಸ್ಸು ಒಪ್ಪಿಕೋ ಎಂದು ಒತ್ತಿ ಒತ್ತಿ ಹೇಳುತ್ತಿತ್ತು. ಆದರೆ ಮನಸ್ಸಿನ ಮೂಲೆಯಲ್ಲಿ ತಳಮಳ – ಇದು ತಪ್ಪಲ್ಲವೇ? ಮನಸ್ಸು ಮತ್ತು ಬುದ್ಧಿಯ ಹೋರಾಟದಲ್ಲಿ ಬುದ್ಧಿಯೇ ಗೆದ್ದಿತು. ಆಗಿದ್ದು ಆಗಲಿ, ಇಷ್ಟು ವರ್ಷಗಳು ಕಷ್ಟಪಟ್ಟಿದ್ದು ಸಾಕು. ಇನ್ನು ಮುಂದಾದರೂ ಆರಾಮವಾಗಿ ಜೀವನ ನಡೆಸಬಹುದು. ಇದು ಕಟ್ಟ ಕಡೆಯ ಪಾತ್ರ. ಬಂದ ಹಣವನ್ನು ಬ್ಯಾಂಕಿನಲ್ಲಿಟ್ಟು ಬಡ್ಡಿಯನ್ನು ಮಾತ್ರ ಉಪಯೋಗಿಸಿಕೊಂಡರೆ ಸಾಮಾನ್ಯ ಜೀವನಕ್ಕೇನೂ ಕಷ್ಟವಿಲ್ಲ. ಮನಸ್ಸಿಗೆ ಹಾಗೆ ಅನಿಸಿದ್ದೇ ತಡ, ಮತ್ತೆ ಅವರ ಕರೆಗಾಗಿ ಕಾಯುತ್ತಾ ಕುಳಿತಳು. ತುತ್ತಿಗಾಗಿ ನಡೆಸಿದ ಹೋರಾಟದ ಬದುಕಿನ ಚಿತ್ರಗಳು ಎಳೆ ಎಳೆಯಾಗಿ ಕಣ್ಮುಂದೆ ಹಾದುಹೋದವು.

'ಸರಸಮ್ಮ, ಕ್ಷಮಿಸಿ ಬಿಡಮ್ಮ. ನಂದು ಬಹಳ ತಪ್ಪಾಗೋಯ್ತು. ಏನ್ಮಾಡ್ಲೀ, ಒಂದೇ ಟೇಕ್‌ನಲ್ಲಿ ಓಕೆ ಆಗಬೇಕು ಅಂತ ಸ್ವಲ್ಪ ಜಾಸ್ತೀನೇ ಒರಟಾಗಿ ನಡಕೊಂಡೆ. ಅದು...' ಎಂದು ಏನೋ ಹೇಳಲು ಹೊರಟ ಕೆಂಪಯ್ಯ ಸರಸಾಳ ಪರಿಸ್ಥಿತಿಯನ್ನು ನೋಡಿ ತಲೆ ತಗ್ಗಿಸಿ ನಿಂತುಬಿಟ್ಟ. ಸರಸ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಮುಸಿ ಮುಸಿ ಅಳುತ್ತಾ ಮೂಲೆಗೊರಗಿ ಕುಳಿತುಕೊಂಡಿದ್ದಳು. ಅವಳ ಮುಖ ಬಾತುಹೋಗಿತ್ತು. ಮೈ ಕೈಗಳ ಮೇಲೆ ಉಗುರುಗಳಿಂದ ಪರಚಿದ ಗಾಯಗಳಾಗಿ ರಕ್ತ ಒಸರುತ್ತಿತ್ತು.

'ನೋಡ್ರೋ ಆಯುಮ್ಮಂಗೆ ಏನಾಗೈತೆ ಅಂತ. ನಮ್ಮ ತಲೆಗೆ ತಂದು ಬಿಟ್ಬಾಳು' ಎಂದ ಮ್ಯಾನೇಜರ್ ಸಾಹೇಬ, ಅಳುತ್ತಾ ಕುಳಿತಿದ್ದ ಸರಸಮ್ಮನನ್ನು ನೋಡಿ ಸ್ವಲ್ಪ ಬೆಚ್ಚಿದ.

'ಏನ್ ಕೆಂಪಯ್ಯ, ಏನು ಅಭಿನಯ? ಅಬ್ಬಬ್ಬಾ... ಅಭಿನಯಾನೋ ಅಥವಾ ನಿಜವಾಗೇ...'

'ಸಾರ್, ಅದು ಆವೇಶ ಬಂದ ಹಾಗೆ... ನಿಮಗೆ ಓಕೆ ಆದ್ರೆ ಸಾಕು...'

'ಓಕೆನಾ... ಡಬಲ್ ಓಕೆ. ಅಲ್ಲಾ, ಸುಮ್ನೆ ನಾಟ್ಕ ಮಾಡೋ ಅಂದ್ರೆ ಆಯಮ್ಮನ ಪ್ರಾಣಕ್ಕೇ ಸಂಚಕಾರ ತಂದ್ರಲ್ಲ! ಡೈರೆಕ್ಟರ್ ಕಟ್ ಅನ್ನದೇ ಹೋಗಿದ್ರೆ, ಆಯಮ್ಮನ ಹೆಣ ನೋಡ್ಬೇಕಾಗಿತ್ತು...'



ಅಷ್ಟರಲ್ಲಿ 'ಸಾರ್ ಮೇಡಂ ಬಂದ್ರು' ಎಂದದ್ದೇ ತಡ, ಸರಸಾಳ ಕಡೆ ತಿರುಗಿಯೂ ನೋಡದೆ ಹೀರೋಯಿನ್ ಬರಮಾಡಿಕೊಳ್ಳಲು ಹೊರಟೇ ಬಿಟ್ಟ.

ಇದೇನು ಹೊಸದಲ್ಲ ಸರಸಳಿಗೆ. ಈ ಎಕ್ಸ್‌ಟ್ರಾ ನಟಿಯ ಪಾತ್ರ ಒಪ್ಪಿಕೊಂಡಾಗಲಾಯ್ತು ಒಂದಲ್ಲ ಒಂದು ನೋವು ಸಂಕಟ ಇದ್ದದ್ದೇ. ಒಂದು ಗಾಯ ವಾಸಿಯಾಗುವ ಮುನ್ನವೇ ಮತ್ತೊಂದು ಕರೆ ಬಂದು ಹೋದದ್ದೂ ಇದೆ. ಒಂದು ನಾಲ್ಕು ಕಾಸು ಕೈಗೆ ಬೀಳಲು ಅವಳು ತನ್ನ ಪ್ರಾಣವನ್ನೇ ಪಣಕ್ಕಿಟ್ಟಿದ್ದಿದೆ. ಒಂದೇ ಉಪಕಾರವೆಂದರೆ ಡ್ರೈವರ್ ಶಿವಣ್ಣನಿಗೆ ಹೇಳಿ ಅವಳನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅವಳ ಗಾಯಗಳಿಗೆ ಬ್ಯಾಂಡೇಜ್ ಮಾಡಿ ನಂಜಾಗದಂತೆ ಔಷಧಿ–ಮಾತ್ರೆ ಕೊಟ್ಟು ಕಳುಹಿಸಿದರು. ಸರಸ ಕಾರಿಗೊರಗಿ ಕುಳಿತದ್ದೇ ತಡ ಮಂಪರು ಹತ್ತಿತು.

ಶಿವಣ್ಣ ಆಸ್ಪತ್ರೆಯಲ್ಲಿ ದುಡ್ಡನ್ನು ತೆತ್ತು ಉಳಿದ ಹಣವನ್ನು ತನ್ನ ಜೇಬಿಗೆ ಇಳಿಬಿಟ್ಟ. ಅಲ್ಲಿಂದ ಅವಳ ಮನೆಯ ಹತ್ತಿರ ತಂದು ನಿಲ್ಲಿಸಿದ.

'ಇಳಿಯಮ್ಮ ಬೇಗ. ನಾನು ನಿನ್ನ ಬಿಟ್ಟು ಮತ್ತೆ ಲೊಕೇಶನ್‌ಗೆ ಹೋಗಬೇಕು. ಆ ಹೀರೋಯಿನ್ ಈಗ ಬಂದಿದಾಳೆ. ಇನ್ನೂ ಎಷ್ಟು ಹೊತ್ತಾಗುತ್ತೋ ಏನೋ...' ಎಂದು ಶಿವಣ್ಣ ಗೊಣಗುತ್ತಲೇ ಅವಳನ್ನು ಇಳಿಸಿ ಅವಳ ಉತ್ತರಕ್ಕೂ ಕಾಯದೇ ಹೊರಟುಬಿಟ್ಟ. ಸರಸ ಮನೆಗೆ ಬಂದವಳೇ ಹಾಸಿಗೆಗೆ ಮೈ ಒಡ್ಡಿದಳು. ಅವಳಿಗಾಗಲೇ ಜ್ವರ ಬಂದು ಮೈ ಕೆಂಡವಾಗಿತ್ತು. ಮನೆಯಲ್ಲಿ ಮಾಡಿ ಹಾಕುವವರೂ ಯಾರು ಇಲ್ಲ. ಅಸಹಾಯಕತೆಯಿಂದ ಅವಳ ಕಣ್ಣು ತುಂಬಿ ಬಂದವು. ಯಾರೋ ಅಯ್ಯೋ ಪಾಪ ಎಂದು ಕೊಟ್ಟಿದ್ದ ಹಳೆಯ ಮಾಡೆಲಿನ ಮೊಬೈಲು ಟ್ರಿಣ್‌ಗುಟ್ಟಿತು. ಅವಳ ದಿನದ ಊಟಕ್ಕೆ ಅದುವೇ ಸುವರ್ಣ ಸೇತು. ಆದರೆ ಅವಳಿಗೆ ಹಲೋ ಎನ್ನುವ ತಾಕತ್ತೂ ಇಲ್ಲ. ಬಿಟ್ಟರೆ ನಾಳಿನ ತುತ್ತಿನ ಚೀಲ ತುಂಬುವುದು ಹೇಗೆ? ಅರೆ ಪ್ರಜ್ಞಾವಸ್ಥೆಯಲ್ಲಿ ದಿನ ಕಳೆದೇ ಹೋಯಿತು.

'ಫೋನು ಮಾಡಿದ್ರೆ ಎತ್ತಕ್ಕೆ ಏನಮ್ಮ ದಾಢಿ? ಸರಿ, ಒಂದು ಚಿಕ್ಕ ಸೀನ್ ಇದೆ. ನಾಳೆ ಬಂದ್ಬಿಡು. ಹಾಗೇ ಪೇಮೆಂಟು ತೊಗೊಂಡು ಹೋಗು.'

'ಸರಿ ಸಾರ್. ಎಷ್ಟು ಹೊತ್ತಿಗೆ ಬರಬೇಕು?'

'ಬಾರಮ್ಮ 9 ಗಂಟೆಗೆ. ಲೊಕೇಶನ್ ಗೊತ್ತಲ್ಲ.'

'ಸಾರ್, ಅದು ಕಾರು ಕಳಿಸಿದ್ರೆ...'

'ಅಲ್ಲಮ್ಮ, ಎಕ್ಸ್‌ಟ್ರಾಗೆಲ್ಲ ಕಾರ್ ಕಳಿಸ್ತಾ ಇದ್ರೆ ಪ್ರೊಡ್ಯೂಸರ್ ಗತಿ ಗೋವಿಂದ ಅಷ್ಟೇ' ಎಂದ ಮರುಗಳಿಗೆಯೇ ಫೋನು ಡಿಸ್ಕನೆಕ್ಟ್ ಆಯ್ತು.

ಸರಸಳಿಗೆ ಇದು ಹೊಸತೇನೂ ಅಲ್ಲ. ಅಲ್ಲಿ ನಡೆಸಿಕೊಳ್ಳುವ ರೀತಿಯೂ ಅಷ್ಟೇ. ಹೊಟ್ಟೆ ತುಂಬಾ ಊಟ ಒಂದೇ ಗ್ಯಾರಂಟಿ. ಮಾಡಿರುವ ಕೆಲಸಕ್ಕೂ ಪೇಮೆಂಟು ಕೊಡಲು ನಾಲ್ಕಾರು ಬಾರಿ ಓಡಾಡಿಸುತ್ತಿದ್ದರು. ಅವನು ಹೇಳಿದ ದಿನ ಹೋಗಲಿಲ್ಲ ಅಂದರೆ ಪೇಮೆಂಟೂ ಸಿಗುವುದಿಲ್ಲ.

ಈ ಕೆಂಪಯ್ಯನಂತಹ ಕಲಾವಿದರ ಜೊತೆ ಕೆಲಸ ಮಾಡಿದರೆ ಸರಿಯಾಗಲು ತಿಂಗಳೇ ಆಗುತ್ತಿತ್ತು. ಜ್ವರದಲ್ಲೇ ಸರಸು ಲೊಕೇಶನ್ ತಲುಪಿದಳು. ಎಷ್ಟೋ ಹೊತ್ತಿನ ನಂತರ ಡೈರೆಕ್ಟರು ಇವಳನ್ನು ನೋಡಿ:

'ಅಯ್ಯೋ ಈಯಮ್ಮಂದು ನೆನ್ನೇನೇ ಆಯ್ತಲ್ರೀ. ಮತ್ತೆ ಯಾಕೆ ಕರೆಸಿದಿರಿ.'

'ಸಾರ್, ಅದು ಮೇಡಂ ಹೊರಟು ಬಿಟ್ರು. ರೇಪ್ ಆದ ಮೇಲೆ ರಸ್ತೆಯಲ್ಲಿ ಬಿದ್ದ ಸೀನ್ ತೊಗೊಂಡಿಲ್ಲ. ಮುಖ ಕವರ್ ಆಗಿರುತ್ತೆ. ಅದಕ್ಕೆ ಕರೆಸಿದೆ. ಜೊತೆಗೆ ಪೇಮೆಂಟು ಕೊಡೋದಿತ್ತು.'

'ಸರಿ ಸರಿ, ತೊಗೊಂಡು ಕಳಿಸಿ.'

'ಲೇ ಮಂಜ, ನೆನ್ನೆ ಮೇಡಮ್ ಹಾಕಿದ್ರಲ್ಲ, ಆ ಕಾಸ್ಟ್ಯೂಮು ತಂದು ಈಯಮ್ಮಂಗೆ ಕೊಡು...'

ಹೀರೋಯಿನ್ ಧರಿಸುವಂತಹ ಉಡುಪು ಸಿಕ್ಕುತ್ತಿತ್ತು ನಿಜ. ಆದರೆ ಗಾಯಗಳು, ಹೊಡೆತಗಳು ಕೂಡ ಏನೂ ಕಮ್ಮಿ ಇಲ್ಲ. ಒಮ್ಮೆ ಮೆಟ್ಟಿಲುಗಳನ್ನು ಉರುಳಿಕೊಂಡು ಬೀಳಬೇಕು. ಮತ್ತೊಮ್ಮೆ ಚಲಿಸುವ ವಾಹನಗಳಿಂದ ಬೀಳಬೇಕು. ಜೈಲಿನಲ್ಲಿ ಇರುವ, ಕೆಲಸ ಮಾಡುವ ದೃಶ್ಯಗಳು. ಇಲ್ಲವಾದರೆ ರೇಪು. ಅದೂ ಇಲ್ಲವೆಂದರೆ ಬೆಡ್‌ರೂಂ ಬಿಸಿ ಬಿಸಿ ದೃಶ್ಯಗಳು, ಸ್ನಾನದ ದೃಶ್ಯಗಳು. ಪ್ರಸಿದ್ಧಿ ಪಡೆದ ಹೀರೊಯಿನ್ ಒಮ್ಮೊಮ್ಮೆ ಯಾವುದಾದರೂ ದೃಶ್ಯ ನಿರಾಕರಿಸಿದರೆ ಸರಸು ಪಾಲಿಗೆ ಬರುತ್ತಿತ್ತು. ಹೀರೊಯಿನ್ ಕಷ್ಟಪಟ್ಟು ಜಿಮ್ ಮಾಡಿ ಊಟ ಬಿಟ್ಟು ಸಣ್ಣಗಾದರೆ, ಸರಸೂ ಹೊಟ್ಟೆಗಿಲ್ಲದೆಯೇ ಸಣ್ಣಗಿದ್ದಳು. ಇನ್ನೂ ಸಂಭಾವನೆಯಂತೂ ಕೇಳುವಂತೆಯೇ ಇಲ್ಲ. ಬಹಳ ಕಡಿಮೆ. ಕೆಲವೊಮ್ಮೆ ಹೇಳಿದುದಕ್ಕಿಂತಲೂ ಹೆಚ್ಚಾಗಿಯೇ ದುಡಿಸಿಕೊಂಡು ಬಿಡಿಗಾಸು ಕೊಡಲು ಸತಾಯಿಸಿದ್ದೂ ಉಂಟು.

ಏನು ನಿರ್ಧಾರವನ್ನು ತೆಗೆದುಕೊಳ್ಳುವುದು? ಸರಸು ಗೊಂದಲದಲ್ಲಿರುವಾಗಲೇ ಮತ್ತೆ ಫೋನು ರಿಂಗಣಿಸಿತು. ಆ ಕರೆಗಾಗಿ ಕಾಯುತ್ತಿದ್ದಳು. ದೇವರ ಮೇಲೆ ಭಾರ ಹಾಕಿ ಸರಸು 'ಹೂಂ' ಎಂದುಬಿಟ್ಟಳು. ಜೀವನವೆಂಬುದು ಹಲವು ಸವಾಲುಗಳ ಪ್ರಶ್ನೆಪ್ರತ್ರಿಕೆ. ಕೆಲವಕ್ಕೆ ಉತ್ತರ ತಿಳಿದಿದ್ದರೆ ಎಷ್ಟೋ ಪ್ರಶ್ನೆಗಳಿಗೆ ಉತ್ತರ ಗೊತ್ತಿರುವುದಿಲ್ಲ. ಗೊತ್ತಿರುವ ಉತ್ತರಗಳು ಒಮ್ಮೊಮ್ಮೆ ಬರೆಯುವಾಗ ತಪ್ಪಾಗಿ ಹೋಗುತ್ತವೆ.

ಇದೆಂತಹ ಪರೀಕ್ಷೆ ದೇವರೇ. ಹೊಸ ಅನುಭವ. ನಟನೆಯಲ್ಲೂ ಭಾವನೆಗಳಿಗೆ ಬೆಲೆಯಿಲ್ಲ. ಇಲ್ಲೂ ಅಷ್ಟೇ. ಇದೂ ಒಂದು ನಟನೆಯೇ. ಪಾತ್ರಕ್ಕೆ ತಕ್ಕಂತೆ ಸಂಭಾವನೆ. ಹುಟ್ಟಿಸಿದ ಅಪ್ಪ ಅಮ್ಮನ ಬಗ್ಗೆ ಅವಳಿಗೆ ಅತೀವ ಕೋಪ ಬರುವುದು. ತನ್ನನ್ನು ಅನಾಥೆ ಮಾಡಿ ತಾವು ಮಾತ್ರ ಹಾಯಾಗಿದ್ದಾರೆ. ಎದುರಿಗೆ ಕಂಡರೂ ಅವರೇ ಅಪ್ಪ ಅಮ್ಮ ಎಂದು ತಿಳಿಯದಷ್ಟೂ ಅಪರಿಚಿತಳು.

ಸರಸು ಸರಿಯಾದ ಸಮಯಕ್ಕೆ ತಯಾರಾಗಿ ಕುಳಿತಿದ್ದಳು. ತನಗೆ ಬೇಕಾದ ಸಾಮಾನುಗಳು ಇವೆಯೇ ಎಂದು ಪದೇ ಪದೇ ಪರೀಕ್ಷಿಸುತ್ತಿದ್ದಳು. ಒಂದು ಕಾರು ಬಂದು ನಿಂತಿತು. ಡ್ರೈವರ್ ಮಾತ್ರ ಇದ್ದ. ಇವಳ ಸಾಮಾನು ಡಿಕ್ಕಿಯೊಳಗೆ ತುರುಕಿ ಬಾಗಿಲು ತೆಗೆದು ಕುಳಿತುಕೊಳ್ಳುವಂತೆ ತಿಳಿಸಿದ. ಈ ರೀತಿಯ ಉಪಚಾರವೆಲ್ಲ ಸರಸಳಿಗೆ ಹೊಸತು. ಮುದುರಿ ಕುಳಿತಳು. ಅವಳನ್ನು ಭವ್ಯವಾದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸರಸಾಳ ಎದೆ ಹೊಡೆದುಕೊಳ್ಳಲಾರಂಭಿಸಿತು. ಎಕ್ಸ್‌ಟ್ರಾ ನಟಿಯ